ಮಂಗಳೂರು ವಿಶ್ವವಿದ್ಯಾನಿಲಯ
MANGALORE UNIVERSITY

ಕ್ರಮಾಂಕ/No. ಎಂಯು/ಎಸಿಸಿ/ಯುಜಿ-ಕ್ಯಾಲ್/ಸಿಆರ್15/2020-21/ಎ6

ಕುಲಸಚಿವರಕಛೇರಿ
ಮಂಗಳಗಂಗೋತ್ರಿ – 574 199
Office of the Registrar
Mangalagangothri – 574 199
ದಿನಾಂಕ/Date:08.09.2021

## ಸುತ್ತೋಲೆ

ವಿಷಯ: ಶೈಕ್ಷಣಿಕ ವರ್ಷ 2020-21ನೇ ಸಾಲಿನ ಸ್ನಾತಕ ಮತ್ತು ಸ್ನಾತಕೋತ್ತರ ಕಾರ್ಯಕ್ರಮಗಳ ತರಗತಿಗಳನ್ನು ನಡೆಸುವ ಬಗ್ಗೆ.

ಉಲ್ಲೇಖ: 1) ಮಾನ್ಯ ಜಿಲ್ಲಾಧಿಕಾರಿ ಹಾಗೂ ಅಧ್ಯಕ್ಷರು, ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರ, ದಕ್ಷಿಣ ಕನ್ನಡ ಇವರ ಕಚೇರಿಯಲ್ಲಿ ದಿನಾಂಕ: 07-09-2021ರಂದು ನಡೆದ ಸಭೆಯ ನಡವಳಿ.

*****

ಮಂಗಳೂರು ವಿಶ್ವವಿದ್ಯಾನಿಲಯದ ಭೌಗೋಳಿಕ ವ್ಯಾಪ್ತಿಗೊಳಪಡುವ ಸ್ನಾತಕ ಹಾಗೂ ಸ್ನಾತಕೋತ್ತರ ಕಾರ್ಯಕ್ರಮಗಳನ್ನು ನಡೆಸಲ್ಪಡುವ ಸ್ನಾತಕೋತ್ತರ ಕೇಂದ್ರ/ ವಿಭಾಗಗಳು/ ಕಾಲೇಜುಗಳ ಶೈಕ್ಷಣಿಕ ವರ್ಷ 2020-21ನೇ ಸಾಲಿನ ತರಗತಿಗಳನ್ನು ಈ ಕೆಳಗಿನ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಅನುಸರಿಸಿಕೊಂಡು ನಡೆಸಲು ಸೂಚಿಸಲಾಗಿದೆ.

**ಮಾರ್ಗಸೂಚಿಗಳು:**

1. ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ವಿಶ್ವವಿದ್ಯಾನಿಲಯದ ಸಂಯೋಜಿತ/ಘಟಕ ಕಾಲೇಜುಗಳ/ಸ್ನಾತಕೋತ್ತರ ಕೇಂದ್ರಗಳ ಅಂತಿಮ ಪದವಿಯ ಪ್ರಾಯೋಗಿಕ ತರಗತಿಗಳನ್ನು ವಿದ್ಯಾರ್ಥಿಗಳನ್ನು ತಂಡಗಳನ್ನಾಗಿ ವಿಭಜಿಸಿಕೊಂಡು, ಜಾರಿಯಲ್ಲಿರುವ ಎಲ್ಲಾ ಕೋವಿಡ್ ಸುರಕ್ಷಾ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಿಕೊಂಡು ಭೌತಿಕ ತರಗತಿಗಳನ್ನು ನಡೆಸಲು ಅನುಮತಿಸಲಾಗಿದೆ. ಭೌತಿಕ ತರಗತಿಗಳಿಗೆ ಸಂಬಂಧಿಸಿದಂತೆ ಸರಕಾರದ ಎಸ್. ಓ. ಪಿ (ಪ್ರಮಾಣಿತ ಕಾರ್ಯಾಚರಣಾ ವಿಧಾನ-ಮಾರ್ಗಸೂಚಿ) ನಿಯಮಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.
2. ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಸ್ನಾತಕ ಮತ್ತು ಸ್ನಾತಕೋತ್ತರ ಕಾರ್ಯಕ್ರಮಗಳಿಗೆ ಕೇವಲ ಆನ್‌ಲೈನ್ ತರಗತಿಗಳನ್ನು (Theory) ಮಾತ್ರ ನಡೆಸತಕ್ಕದ್ದು.
3. ಉಡುಪಿ ಮತ್ತು ಕೊಡಗು ಜಿಲ್ಲಾ ವ್ಯಾಪ್ತಿಯ ಕಾಲೇಜುಗಳು ಆಯಾಯ ಜಿಲ್ಲಾಡಳಿತದ ಮಾರ್ಗಸೂಚಿಯನ್ವಯ ಆನ್‌ಲೈನ್/ಆಫ್‌ಲೈನ್ ತರಗತಿಗಳನ್ನು ನಡೆಸಲು ಅನುಮತಿ ನೀಡಲಾಗಿದೆ.

..2

4. ಕೇರಳದಿಂದ ಬರುವ ವಿದ್ಯಾರ್ಥಿಗಳಿಗೆ ಜಾರಿಯಲ್ಲಿರುವ RTPCR ನೆಗೆಟಿವ್ ಟೆಸ್ಟ್ ಪ್ರಮಾಣಪತ್ರ ಹೊಂದಿರುವ ಮತ್ತು ಅಂತರಾಜ್ಯ ಪ್ರಯಾಣಕ್ಕೆ ಸಂಬಂಧಿಸಿದ ಇತರ ನಿಯಮಗಳು ಕಡ್ಡಾಯವಾಗಿ ಪಾಲನೆಯಾಗುವುದನ್ನು ಆಯಾಯ ಪ್ರಾಂಶುಪಾಲರು ಖಚಿತಪಡಿಸಿಕೊಳ್ಳಬೇಕು.

ಉಲ್ಲೇಖಿತ ಸಭೆಯ ನಡವಳಿಯನ್ನು ಹಾಗೂ ಸರಕಾರದ ಪತ್ರವನ್ನು ತಮ್ಮ ಅವಗಾಹನೆಗಾಗಿ ಲಗತ್ತಿಸಲಾಗಿದೆ.

ಕುಲಸಚಿವರು

ರಿಗೆ,

1) ಮಾನ್ಯ ಜಿಲ್ಲಾಧಿಕಾರಿ ಹಾಗೂ ಅಧ್ಯಕ್ಷರು, ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರ, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು-575001
2) ಕುಲಸಚಿವರು (ಪರೀಕ್ಷಾಂಗ), ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.
3) ಮಂಗಳೂರು ವಿಶ್ವವಿದ್ಯಾನಿಲಯದ ಎಲ್ಲಾ ಸಂಯೋಜಿತ/ ಘಟಕ/ ಸ್ವಾಯತ್ತ ಕಾಲೇಜುಗಳ ಪ್ರಾಂಶುಪಾಲರಿಗೆ.
4) ಅಧ್ಯಕ್ಷರು/ ಸಂಯೋಜಕರು, ಎಲ್ಲಾ ಸ್ನಾತಕೋತ್ತರ ವಿಭಾಗ/ ಕಾರ್ಯಕ್ರಮಗಳು, ಮಂಗಳೂರು ವಿಶ್ವವಿದ್ಯಾನಿಲಯದ ಆವರಣ, ಮಂಗಳಗಂಗೋತ್ರಿ/ ಸ್ನಾತಕೋತ್ತರ ಕೇಂದ್ರ, ಚಿಕ್ಕ ಅಳುವಾರ, ಸೋಮವಾರ ಪೇಟೆ, ಕೊಡಗು.
5) ಎ4/ಎ5/ಎ7/ಎ8/ಎ9/ಎ10 ವಿಷಯ ನಿರ್ವಾಹಕರು, ಶೈಕ್ಷಣಿಕ ವಿಭಾಗ, ಕುಲಸಚಿವರ ಕಚೇರಿ, ಮಂಗಳೂರು ವಿಶ್ವವಿದ್ಯಾನಿಲಯ.

## ದಿನಾಂಕ 07.09.2021 ರಂದು ಮಾನ್ಯ ಜಿಲ್ಲಾಧಿಕಾರಿ ಹಾಗೂ ಅಧ್ಯಕ್ಷರು, ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರ, ದಕ್ಷಿಣ ಕನ್ನಡ ಜಿಲ್ಲೆ, ಇವರ ಅಧ್ಯಕ್ಷತೆಯಲ್ಲಿ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಕಾಲೇಜುಗಳಲ್ಲಿ ಭೌತಿಕ ತರಗತಿಗಳನ್ನು ನಡೆಸುವ ಬಗ್ಗೆ ಜರಗಿದ ಸಭೆಯ ನಡವಳಿ

ಉಪಸ್ಥಿತರು:-

1. ಡಾ| ರಾಜೇಂದ್ರ ಕೆ.ವಿ., ಭಾ.ಆ.ಸೇ, ಜಿಲ್ಲಾಧಿಕಾರಿ, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು
2. ಜಂಟಿ ನಿರ್ದೇಶಕರು, ಪ್ರಾದೇಶಿಕ ಜಂಟಿ ನಿರ್ದೇಶಕರ ಕಛೇರಿ, ಕಾಲೇಜು ಶಿಕ್ಷಣ ಇಲಾಖೆ, ಮಂಗಳೂರು.
4. ವಿಶೇಷಾಧಿಕಾರಿ ಮತ್ತು ನೋಡಲ್ ಅಧಿಕಾರಿ, ಪ್ರಾದೇಶಿಕ ಜಂಟಿ ನಿರ್ದೇಶಕರ ಕಛೇರಿ, ಕಾಲೇಜು ಶಿಕ್ಷಣ ಇಲಾಖೆ, ಮಂಗಳೂರು.
5. ಪ್ರಾಂಶುಪಾಲರು, ಸರಕಾರಿ ಪ್ರಥಮ ದರ್ಜೆ ಕಾಲೇಜು, ಮಂಗಳೂರು, ರಥಬೀದಿ (ದ. ಕ. ಜಿಲ್ಲೆ ಲೀಡ್ ಕಾಲೇಜು).

ದಕ್ಷಿಣ ಕನ್ನಡ ಜಿಲ್ಲೆಯ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಕಾಲೇಜುಗಳಲ್ಲಿ ಮತ್ತು ಅಧ್ಯಯನ ಕೇಂದ್ರಗಳಲ್ಲಿ ಕೇರಳ ರಾಜ್ಯದಿಂದ ನಿತ್ಯ ಸಂಚರಿಸುವ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದು, ವಿದ್ಯಾರ್ಥಿಗಳ ಹಾಗೂ ಸಾರ್ವಜನಿಕರ ಹಿತದೃಷ್ಟಿಯಿಂದ ಮಂಗಳೂರು ವಿಶ್ವವಿದ್ಯಾನಿಲಯ ಆಗಸ್ಟ್ ತಿಂಗಳಲ್ಲಿ ನಡೆಸಬೇಕಿದ್ದ ಎಲ್ಲಾ ಪರೀಕ್ಷೆಗಳನ್ನು ತಾತ್ಕಾಲಿಕವಾಗಿ ರದ್ದುಗೊಳಿಸಿ, ಮುಂದಿನ ಆದೇಶದವರೆಗೆ ಎಲ್ಲಾ ತರಗತಿ ಹಾಗೂ ಪರೀಕ್ಷೆಗಳನ್ನು ಮುಂದೂಡುವಂತೆ ದಿನಾಂಕ 03-0802021 ರಂದು ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಸೂಚನೆ ನೀಡಲಾಗಿತ್ತು.

ಆದಾಗ್ಯೂ, ವಿಶ್ವವಿದ್ಯಾನಿಲಯದ ಮತ್ತಿತ್ತರ ಸ್ವಾಯತ್ತ/ಡೀಮ್ಡ್ ವಿದ್ಯಾಸಂಸ್ಥೆಗಳ ಬಾಕಿ ಇರುವ ಸ್ನಾತಕ/ಸ್ನಾತಕೋತ್ತರ ಪರೀಕ್ಷೆಗಳನ್ನು ನಡೆಸುವುದು ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಮುಖ್ಯವಾಗಿರುವ ಕಾರಣ, ಬಾಕಿಇರುವ ಪರೀಕ್ಷೆಗಳನ್ನು ಕೋವಿಡ್-೧೯ ನಿಯಮಗಳ ಪ್ರಕಾರ ದಿನಾಂಕ 11.08.2021 ರಿಂದ ನಡೆಸಲು ದಿನಾಂಕ 05-08-2021 ರಂದು ಸಭೆ ನಡೆಸಿ ಅನುಮತಿ ನೀಡಲಾಗಿದೆ.

ದಿನಾಂಕ 04.09.2021ರಂದು ಪರೀಕ್ಷೆಗಳು ಮುಗಿಯುತ್ತಿರುವ ಕಾರಣ, ವಿಶ್ವವಿದ್ಯಾನಿಲಯದ ಕುಲಸಚಿವರು ಮತ್ತು ಸ್ವಾಯತ್ತ/ಡೀಮ್ಡ್ ವಿದ್ಯಾ ಸಂಸ್ಥೆಗಳ ಪ್ರಾಂಶುಪಾಲರು/ಪ್ರತಿನಿಧಿಗಳೊಂದಿಗೆ 26.08.2021ರಂದು ಸಭೆ ನಡೆಸಿ, ಜಿಲ್ಲೆಯ ಕೋವಿಡ್-೧೯ ಸೂಕ್ಷ್ಮ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು, ಸಪ್ಟೆಂಬರ್ 15, 2021ರ ತನಕ ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಸ್ನಾತಕ ಮತ್ತು ಸ್ನಾತಕೋತ್ತರ ಕಾಲೇಜುಗಳು ಮತ್ತು ವಿದ್ಯಾ ಸಂಸ್ಥೆಗಳು ದಿನಾಂಕ 06-09-2021 ರಿಂದ ಎಲ್ಲಾ ಕೋರ್ಸುಗಳಿಗೆ ಕೇವಲ ಆನ್-ಲೈನ್ ತರಗತಿಗಳನ್ನು ಮಾತ್ರ ನಡೆಸಬೇಕು ಎಂದು ನಿರ್ಧರಿಸಲಾಗಿತ್ತು.

ಈ ಹಿನ್ನೆಲೆಯಲ್ಲಿ, ಸರಕಾರದ ನಿಯಮಾವಳಿ ಪ್ರಕಾರ ಮುಂದೆ ವಿವಿ ಮಟ್ಟದ ಪರೀಕ್ಷೆಗಳನ್ನು ಎದುರಿಸಬೇಕಾದ ಮಂಗಳೂರು ವಿವಿ ವ್ಯಾಪ್ತಿಯ ಅಂತಿಮ ಸೆಮಿಸ್ಟರ್‌ನ ವಿದ್ಯಾರ್ಥಿಗಳಿಗೆ, ಅದರಲ್ಲೂ ಪ್ರಮುಖವಾಗಿ ಪರಿಣಾಮಕಾರಿಯಾಗಿ ಅನ್-ಲೈನ್ ತರಗತಿಗಳ ಮೂಲಕ ಬೋಧಿಸಲು ಅಸಾಧ್ಯವಾಗಿರುವ ಪ್ರಾಯೋಗಿಕ ತರಗತಿಗಳಿಗಾದರೂ ಭೌತಿಕ ತರಗತಿಗಳಿಗೆ ಅನುಮತಿಸಬೇಕಾಗಿ ಕೋರಿಕೆಗಳು ಜಿಲ್ಲೆಯ ಕಾಲೇಜುಗಳಿಂದ ಬರುತ್ತಿರುವ ಕಾರಣ, ಆ ಬಗ್ಗೆ ತಾರೀಕು 06.09.2021ರಂದು ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸಭೆಯಲ್ಲಿ ಚರ್ಚೆ ನಡೆದು ಅನುಮತಿ ನೀಡಲಾಗಿರುವ ಕಾರಣ. ಈ ಕೆಳಕಂಡಂತೆ ತೀರ್ಮಾನಿಸಲಾಗಿದೆ:

1. ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ವಿವಿಗೆ ಸಂಯೋಜಿತ/ಘಟಕ ಕಾಲೇಜುಗಳ/ಸ್ನಾತಕೋತ್ತರ ಕೇಂದ್ರಗಳ **ಪ್ರಾಯೋಗಿಕ ತರಗತಿಗಳನ್ನು ಹೊಂದಿರುವ ಪದವಿಗಳ ಅಂತಿಮ ಸೆಮಿಸ್ಟರ್‌ಗಳ ಅಗತ್ಯವಾದ ಪ್ರಾಯೋಗಿಕ ತರಗತಿಗಳನ್ನು ಮಾತ್ರ** ವಿದ್ಯಾರ್ಥಿಗಳನ್ನು ತಂಡಗಳನ್ನಾಗಿ ವಿಭಜಿಸಿಕೊಂಡು, ಜಾರಿಯಲ್ಲಿರುವ ಎಲ್ಲಾ ಕೋವಿಡ್ ಸುರಕ್ಷಾ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಿಕೊಂಡು ಭೌತಿಕ ತರಗತಿಗಳನ್ನು ನಡೆಸಲು ಅನುಮತಿಸಲಾಗಿದೆ. ಭೌತಿಕ ತರಗತಿಗಳಿಗೆ ಸಂಬಂಧಿಸಿದಂತೆ ಸರಕಾರದ **ಎಸ್. ಒ. ಪಿ.** ನಿಯಮಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

2. ಕೇರಳದಿಂದ ಬರುವ ವಿದ್ಯಾರ್ಥಿಗಳಿಗೆ ಜಾರಿಯಲ್ಲಿರುವ **RTPCR ನೆಗೆಟಿವ್ ಟೆಸ್ಟ್ ಪ್ರಮಾಣಪತ್ರ ಹೊಂದಿರುವ** ಮತ್ತು ಅಂತರಾಜ್ಯ ಪ್ರಯಾಣಕ್ಕೆ ಸಂಬಂಧಿಸಿದ ಇತರ ನಿಯಮಗಳು ಕಡ್ಡಾಯವಾಗಿ ಪಾಲನೆಯಾಗುವುದನ್ನು ಆಯಾಯ ಪ್ರಾಂಶುಪಾಲರು ಖಚಿತಪಡಿಸಿಕೊಳ್ಳಬೇಕು.

3. ಇನ್ನುಳಿದ **ಎಲ್ಲಾ ಸ್ನಾತಕ ಮತ್ತು ಸ್ನಾತಕೋತ್ತರ ಕೋರ್ಸುಗಳಿಗೆ ಹಿಂದಿನ ಸಭೆಯಲ್ಲಿ ತೀರ್ಮಾನಿಸಿದಂತೆ ಕೇವಲ ಅನ್-ಲೈನ್ ತರಗತಿಗಳನ್ನು ಮಾತ್ರ** ನಡೆಸಬೇಕು ಎಂದು ನಿರ್ಧರಿಸಲಾಯಿತು.

4. **ಸಪ್ಟೆಂಬರ್ 15, 2021** ರ ನಂತರ ಮತ್ತೊಮ್ಮೆ ಸಭೆ ಸೇರಿ ಜಿಲ್ಲೆಯ ಕೋವಿಡ್-೧೯ ಪರಿಸ್ಥಿತಿಯ ಮೇಲೆ ಇತರ ಭೌತಿಕ ತರಗತಿಗಳಿಗೆ ಅನುಮತಿ ನೀಡುವ ಬಗ್ಗೆ ಪರಿಶೀಲಿಸಲು ನಿರ್ಧರಿಸಲಾಯಿತು.

ಜಿಲ್ಲಾಧಿಕಾರಿ ಹಾಗೂ ಅಧ್ಯಕ್ಷರು,
ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರ,
ದಕ್ಷಿಣ ಕನ್ನಡ ಜಿಲ್ಲೆ

ಪ್ರತಿ: ಸಂಬಂಧಪಟ್ಟವರಿಗೆ.

**GOVERNMENT OF KARNATAKA**

No: HFW 265 ACS 2021

Karnataka Government Secretariat
Vikasa Soudha
Bengaluru, Dated 07.09.2021

## ADVISORY

Subject : Travel to Kerala: In view of increasing COVID - 19 cases in the State of Kerala : Regarding.

Reference: Meeting held under the Chairmanship of Hon'ble Chief Minister, GoK on 5.9.2021, at Krishna, Bengaluru.

*******

In view of the prevailing COVID-19 situation in Kerala, special measure are already in place for arrivals from Kerala. Further, it has been observed that students and employees arriving to Karnataka from Kerala though bringing Negative RT – PCR reports are testing Covid 19 Positive during repeat test and number of such case are considerably high in Dakshina Kannada and Udupi. In this regard instructions have been issued from time to time for arrivals from Kerala for control and prevention of COVID-19 in Karnataka.

Further, the following instructions are given in connection with travel to Kerala:

1. All Administrators / Principals of the Educational / Nursing / Paramedical Institutions are advised to instruct their wards who have not yet returned to Karnataka to defer / postpone their return till the end of October, 2021. Further, they should also advise their wards not to travel to Kerala till the end of October, 2021.
2. All Administrators / owners of Hospitals, Nursing Homes, Offices, Hotels, Factories, Industries, etc, to instruct their wards who have not yet returned to Karnataka to defer / postpone their return till the end of October, 2021. Further, they should also advise their wards not to travel to Kerala till the end of October, 2021.

BB 8/9/21 ACE

AG 8/9/21

3. Public is advised to defer their plan to visit Kerala till the end of October, 2021, if there is no emergency / urgency with a view to avoid 3rd wave of COVID-19 in Karnataka in the larger interest of Public Health.

(Jawaid Akhtar)
Additional Chief Secretary to Govt.,
Department of Health and Family Welfare.

To:

1. The Deputy Commissioners of all districts
2. CEO, ZP of all districts
3. The Special Commissioner – Health, BBMP, Bengaluru
4. The District Health and Family Welfare officers of all districts
5. The District Surveillance Officers of all districts

**Copy for kind information to:**

1. Chief Secretary, GoK
2. Additional Chief Secretary to Hon'ble Chief Minister
3. The Chief Commissioner – BBMP, Bengaluru
4. The Commissioner, Health & F W Services, Bengaluru
5. Mission Director-National Health Mission
6. The Director, Health & Family Welfare Services
7. PS to Hon'ble Minister for HFW and Medical Education.